**ಸಾಕ್ಷಿಯನ್ನು ದಿಃ 10.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಸಿ ವಕೀಲರಿಂದಃ–**

ನಿಡಿ. 3 ರ ದಾಖಲೆಯ ಪ್ರಕಾರ ದಿಃ 25.02.2014 ರ ಕ್ರಯ ಪತ್ರವನ್ನು ಕರ್ನಾಟಕ ಬ್ಯಾಂಕ್ ಆಧಾರ (ಪ್ಲಡ್ಜ್) ಮಾಡಲಾಗಿತ್ತು ಎಂದರೆ ಸರಿ. ಅದೆ ದಿನ ಸರ್ವೆ ನಂ. 49/2 ಮತ್ತು ಸರ್ವೆ ನಂ. 52 ರ ಕ್ರಯ ಪತ್ರಗಳನ್ನು ಕರ್ನಾಟಕ ಬ್ಯಾಂಕ್ ಗೆ ಆಧಾರ ಮಾಡಿರುತ್ತೇನೆ ಎಂದರೆ ಸರಿ. 3 ಕ್ರಯ ಪತ್ರಗಳನ್ನು 14 ಕೋಟಿ, 40 ಲಕ್ಷ ರೂ. ಗಳಿಗೆ ಅಧಾರ ಮಾಡಿರುತ್ತೇನೆ ಎಂದರೆ ಎಷ್ಟು ಹಣ ಎಂದು ನನಗೆ ನೆನಪಿಲ್ಲ ಎನ್ನುತ್ತಾರೆ. ಸಾಕ್ಷಿ ಪುನಃ ಲೋನ್ ಮೊತ್ತ 5 ಕೋಟಿ, 60 ಲಕ್ಷ ರೂ. ಇರುತ್ತದೆ ಎಂದು ನುಡಿಯುತ್ತಾರೆ. ಅಭಿವೃದ್ದಿ ಪಡಿಸುವ ಉದ್ದೇಶಗಳಿಂದ ಸದರಿ ಜಮೀನುಗಳನ್ನು ಬ್ಯಾಂಕ್ ಗೆ ಆಧಾರ ಮಾಡಿದ್ದೆ. ದಿಃ 03.08.2015 ರಂದು ದಾವಾ ಸ್ವತ್ತಿಗೆ ಸಂಬಂಧಿಸಿದ ಕ್ರಯ ಪತ್ರಗಳನ್ನು 80 ಲಕ್ಷ ರೂ. ಆಧಾರ ಮಾಡಲಾಗಿತ್ತು ಎಂದರೆ ಸರಿ. ಆದರೆ ಹಣವನ್ನು ಕಂತುಗಳಲ್ಲಿ ನೀಡಿದ್ದರು ಎನ್ನುತ್ತಾರೆ.

ಮೊದಲು ಮಾಡಿರುವಂತಹ 4 ಕೋಟಿ, 80 ಲಕ್ಷಕ್ಕೆ ಅಧಾರ ಮಾಡಿದ ದಾಖಲೆಯನ್ನು ದಿಃ 18.05.2017 ರಂದು ಬಿಡುಗಡೆಗೊಳಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲೆ ಹೇಳಿದ 80 ಲಕ್ಷ ರೂ. ಆಧಾರ ಮಾಡಿದ್ದು ಹಾಗೂ 4 ಕೋಟಿ 80 ಲಕ್ಷಕ್ಕೆ ಆಧಾರ ಮಾಡಿದ್ದು ಎರಡೂ ದಾವಾ ಸ್ವತ್ತಿನ ಕ್ರಯ ಪತ್ರಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ದಿಃ 13.08.2015 ರಂದು ಆಧಾರ ಮಾಡಿದ ಕ್ರಯ ಪತ್ರವನ್ನು ಇನ್ನೂ ಬಿಡುಗಡೆಗೊಳಿಸಿಕೊಂಡಿಲ್ಲ ಎಂದರೆ ಸಾಕ್ಷಿ ಎಲ್ಲಾ ಹಣವನ್ನು ಈಗಾಗಲೆ ಕಟ್ಟಿ ಆಗಿರುತ್ತದೆ ಅದರೆ ಬಿಡುಗಡೆಗೊಳಿಸಿದ ಬಗ್ಗೆ ನನ್ನ ಗಮನಕ್ಕೆ ಇಲ್ಲ. ನಿಡಿ. 3 ಇ.ಸಿ ಯ ಪ್ರಕಾರ ಆಧಾರ ಬಿಡುಗಡೆ ಗೊಳಿಸಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಡಿ. 53 ರ ದಾಖಲೆ ಮೊದಲ ಬಾರಿ ಮಾಡಿದ ವಿಚಾರಣಾ ಸಮಯದಲ್ಲಿ ಹಾಜರು ಪಡಿಸಿಲ್ಲ ನಂತರ ಹಾಜರು ಪಡಿಸಿದ್ದು ಎಂದರೆ ಸರಿ. ನಿಡಿ. 53 ರ ಕ್ರಯ ಪತ್ರ ದಿಃ25.02.2014 ರಂದು ಅಧಾರಕ್ಕೆ ನೀಡಿದ ಕ್ರಯ ಪತ್ರವಾ ಅಥವಾ ದಿಃ

13.08.2015 ರಂದು ಆಧಾರಕ್ಕೆ ನೀಡದ ಕ್ರಯ ಪತ್ರವಾ ಎಂದರೆ ಸಾಕ್ಷಿ ಒಟ್ಟು 30 ಎಕರೆಗೆ ಆಧಾರ ನೀಡಲಾಗಿದ್ದು ಎನ್ನುತ್ತಾರೆ. ನಿಡಿ. 4 ರಿಂದ 8 ರ ಆರ್.ಟಿ.ಸಿಗಳಲ್ಲಿ ಭೂಪರಿವರ್ತನೆ, ನಿವೇಶನಗಳು ಅದ ಬಗ್ಗೆ ನಮೂದು ಆಗಿಲ್ಲ ಎಂದರೆ ಅಲ್ಲಿ ಇರುವುದಿಲ್ಲ, ರೆವಿನ್ಯೂ ಇಲಾಖೆಯವರು ನಮೂದು ಮಾಡಿಲ್ಲ ಎನ್ನುತ್ತಾರೆ.

ನಿಡಿ. 12 ರ ನಮೂನೆ-9 ರಲ್ಲಿ ಸ್ವತ್ತಿನ ಭಾವ ಚಿತ್ರ ಇಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ, ಅದರೆ ಮಾಲೀಕರ ಭಾವ ಚಿತ್ರ ಇದೆ ಎನ್ನುತ್ತಾರೆ. ಅದೆ ರೀತಿ ನಿಡಿ.16 ರಲ್ಲಿ ನಮೂದು ಇಲ್ಲ ಎಂದರೆ ಅದು ಪಂಚಾಯಿತಿ ದಾಖಲೆ ಎನ್ನುತ್ತಾರೆ. ನಿಡಿ. 12 ರ ದಾಖಲೆ ಯಾರು ಯಾವ ದಿನಾಂಕದಲ್ಲಿ ವಿತರಿಸಿದರು ಎಂದರೆ ಅದು ಪಂಚಾಯಿತಿ ದಾಖಲೆ ಎನ್ನುತ್ತಾರೆ. ಅದೆ ರೀತಿ ನಿಡಿ. 13 ರಿಂದ 15 ರಲ್ಲೂ ನಮೂದು ಇಲ್ಲ ಎಂದರೆ ಅದು ಕೂಡ ಪಂಚಾಯಿತಿ ದಾಖಲೆ ಎನ್ನುತ್ತಾರೆ. ನಿಡಿ. 19 ರಲ್ಲಿ ಅಸಿಸ್ಟಂಟ್ ಕಮೀಶನರಿ ರವರ ಸೀಲು ಇರುತ್ತದೆ ಸಹಿ ಇರುವುದಿಲ್ಲ ಎಂದರೆ ಅದು ಸಹ ದೃಡೀಕೃತ ಪ್ರತಿ ಎನ್ನುತ್ತಾರೆ. ಸದರಿ ದಾಖಲೆ ಸೃಷಿಸಿಕೊಂಡ ದಾಖಲೆ ಎಂದರೆ ಸರಿಯಲ್ಲ.ನಿಡಿ. 26 ರ ದಾಖಲೆ ಇತ್ತೀಚೆಗೆ ಸೃಷ್ಟಿಸಿಕೊಂಡ ದಾಖಲೆ ಎಂದರೆ ಸರಿಯಲ್ಲ. ನಿಡಿ. 20, 23 ಮತ್ತು 27 ರ ದಾಖಲೆಯಲ್ಲಿ ತಹಸೀಲ್ದಾರರು ಸಹಿ ಒಂದೇ ರೀತಿ ಇಲ್ಲ ಎಂದರೆ ಸಾಕ್ಷಿ ತಹಸೀಲ್ದಾರರುಗಳು 2 ವರ್ಷಕ್ಕೊಮ್ಮೆ ವರ್ಗಾವಣೆಗೊಳ್ಳುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಗಳನ್ನು ನಾನು ಸೃಷ್ಟಿ ಮಾಡಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ನಿಡಿ. 18, 28 ಮತ್ತು 29 ರ ದಾಖಲೆಗಳಲ್ಲಿ ಎ.ಸಿ ರವರ ಸಹಿಗಳನ್ನು ಒಂದೇ ರೀತಿ ಇರುವುದಿಲ್ಲ ಎಂದರೆ ಸಾಕ್ಷಿ ನಾನು ರಿಜಿಸ್ಟರ್ ಮಾಡಿಸಿಕೊಳ್ಳುವ ಮೊದಲಿನ ದಾಖಲೆಗಳು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ನಿಡಿ.18 ರಿಂದ 31 ರ ದಾಖಲೆಗಳನ್ನು ರಿಜಿಸ್ಟ್ರೇಶನ್ ಸಮಯಕ್ಕೆ ಮಾರಾಟಗಾರರು ನನಗೆ ಕೊಟ್ಟಿದ್ದರು. ರಿಜಿಸ್ಟ್ರೇಶನ್ ಸಮಯಕ್ಕೆ ಕೊಟ್ಟಂತಹ ದಾಖಲೆಗಳನ್ನು ಈ ಕೇಸ್ ಗಾಗಿ ಬೇಕಾದಂತಹ

ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಿಡಿ. 18 ರಿಂದ 31 ರ ದಾಖಲೆಗಳನ್ನು 2018 ರಲ್ಲಿ ತೆಗೆದುಕೊಂಡ ದಾಖಲೆಗಳು ಎಂದರೆ ಸಾಕ್ಷಿ ದೃಡೀಕೃತ ಪ್ರತಿಗಳನ್ನು ತೆಗೆದುಕೊಂಡದ್ದು ಎನ್ನುತ್ತಾರೆ. ನಿಡಿ. 18 ರಿಂದ 31 ರ ದಾಖಲೆಗಳನ್ನು 2018 ರಲ್ಲಿ ಸೃಷ್ಟಿಸಿಕೊಂಡದ್ದು ಎಂದರೆ ಸರಿಯಲ್ಲ. 1997 ರಲ್ಲಿ ಕ್ರಯ ಪತ್ರ ಆಗುವ ಸಮಯದಲ್ಲಿ ನಮ್ಮ ಅಣ್ಣ ಈಶ್ವರ್ ಅಮೇರಿಕಾದಲ್ಲಿ ಇದ್ದರು. ಕ್ರಯ ಪತ್ರ ರಚನೆ ಮಾಡುವ ದಾಖಲೆ ಬರಹಗಾರರಿಗೆ ನಾನು ಕೇಳಿಲ್ಲ. ಇಂಗ್ಲೀಷ್ ಬಾಷೆಯಲ್ಲಿ ಇರುವ ಬರವಣಿಗೆಯನ್ನು ಮಾರಾಟಗಾರರಿಗೆ ನಾನು ಓದಿ ಹೇಳಿಲ್ಲ ಎಂದರೆ ಅವರೆ ಮಾಡಿಸಿಕೊಂಡು ಬಂದಿದ್ದರು ಎನ್ನುತ್ತಾರೆ. ಮಾರಾಟಗಾರರೆ ಮಾಡಿಸಿಕೊಂಡು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ. 1 ಮತ್ತು ನಿಡಿ. 53 ರ ಕ್ರಯ ಪತ್ರದಲ್ಲಿ ಇರುವ ಸಬ್ ರಿಜಿಸ್ಟ್ರಾರ್ ರವರ ಸೀಲು, ಸಹಿಗಳು ಒಂದೇ ರೀತಿಯಲ್ಲಿ ಇಲ್ಲ ಎಂದರೆ ಸರಿ.

ನಿಡಿ. 53 ರ ಕ್ರಯ ಪತ್ರವನ್ನು ನನ್ನ ಮತ್ತು ಸಹೋದರ ಕೆ.ಪಿ. ಈಶ್ವರ ರವರ ಹೆಸರಿನಲ್ಲಿ ತೆಗೆದುಕೊಂಡಿದ್ದು ಎಂದರೆ ಸರಿ. ಒಟ್ಟು 6 ದಾಖಲೆ ಪತ್ರಗಳನ್ನು ನನ್ನ ಮತ್ತು ಸಹೋದರ ಕೆ.ಪಿ. ಈಶ್ವರ ರವರ ಜಂಟಿ ಹೆಸರಿನಲ್ಲೆ ಖರೀದಿಸಲಾಗಿದೆ ಎಂದರೆ ಸರಿ. ದಿಃ 06.08.1997 ರಲ್ಲಿ ಅಲಿನೆನಶ್ ಅಗಿದೆ ಎಂದು ಕರಯ ಪತ್ರದಲ್ಲಿ ಹೇಳಿದ್ದು ಅದು ನ್ಯಾಯಾಲಯಕ್ಕೆ ಕೊಟ್ಟಿದ್ದೇನೊ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಪ್ರತಿ ನಿಮ್ಮ ಕೈಗೆ ಯಾವಾಗ ಸೇರಿದ್ದು ಎಂದರೆ ಸಾಕ್ಷಿ ಎಲ್ಲಾ ದಾಖಲೆಗಳು ರಿಜಿಸ್ಟ್ರಾರ್ ಆಗುವ ಸಮಯದಲ್ಲಿ ಕೊಟ್ಟಿದ್ದರು ಎನ್ನುತ್ತಾರೆ. ನಿಡಿ.18 ಕನ್ವರ್ಶನ್ ಆದೇಶದ ಪ್ರತಿ ಎಂದರೆ ಸರಿ. ಸದರಿ ದಾಖಲೆ ಕನ್ವರ್ಶನ್ ಆಗಿರುವುದು ದಿಃ 07.08.1997 ರಲ್ಲಿ ಎಂದರೆ ಸರಿ. ಕ್ರಯ ಪತ್ರದಲ್ಲಿ ದಿಃ 07.08.1997 ರಲ್ಲಿ ಕನ್ವರ್ಶನ್ ಅದ ಬಗ್ಗೆ ಮಾರಾಟ ಅದ ಬಗ್ಗೆ ನಮೂದು ಇಲ್ಲ ಎಂದರೆ, ಸದರಿ ದಾಖಲೆಯನ್ನು ಮಾರಾಟಗಾರರೆ ರಚನೆ ಮಾಡಿಸಿಕೊಂಡು ಬಂದಿದ್ದು ಎನ್ನುತ್ತಾರೆ.

ದಿಃ 09.01.1997 ರಲ್ಲಿ 4 ಸರ್ವೆ ನಂಬರ್ ಗಳನ್ನು ಒಂದೆ ದಿನ ರಿಜಿಸ್ಟರ್ ಮಾಡಿಸಿಕೊಂಡದ್ದು ಎಂದರೆ ಸರಿ. ಸದರಿ ಸರ್ವೆ ನಂ. ಗಳ ಅಲಿನೇಶನ್ ನಂ.170, 171, 172 ಮತ್ತು 173 ಎಂದರೆ ಸರಿ. ಆ ಸಮಯದಲ್ಲಿ ಸದರಿ ಸರ್ವೆ ನಂ. ಗಳು ಸೈಟ್ ಗಳಾಗಿ ಮಾರ್ಪಾಡಾಗಿರಲಿಲ್ಲ ಎಂದರೆ ಸರಿ. ದಿಃ 07.08.1997 ಒಂದೇ ದಿನ ಮೂರು ಸ್ವತ್ತುಗಳಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಮಾಡಿಸಿಕೊಂಡಿದ್ದೆ ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ಸದರಿ ಸ್ವತ್ತುಗಳ ಕನ್ವರ್ಶನ್ ನಂ. 63,78, 65 ಎಂದರ ನನಗೆ ಜ್ಞಾಪಕವಿಲ್ಲ ಎನ್ನುತ್ತಾರೆ. ಅರ್ಜಿ ಹಾಕಿನ ಕೇವಲ 56 ದಿನಗಳಲ್ಲಿ ಭೂ ಪರಿವರ್ತನೆ ಅದೇಶ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲಗಳೆಲ್ಲಾ ಸೃಷ್ಟಿ ಮಾಡಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ನಿಡಿ. 32 ರ ದಾಖಲೆಯಲ್ಲಿ ದಾವಾ ಸ್ವತ್ತಿನ ವಿವರವಾಗಲಿ, ನಿವೇಶನ ಅಂತಾಗಲಿ, ರಸ್ತೆಯಾಗಲಿ ಇಲ್ಲ ಎಂದರೆ ಸರಿಯಲ್ಲ.

ದಿಃ 27.06.2020 ರಲ್ಲಿ ಈ ಕೇಸಿನ 2 ನೇ ವಾದಿ ನನ್ನ ವಿರುದ್ಧ ಜಮೀನಿನಲ್ಲಿ ಬೆಳೆದಿದ್ದ ಅಲಸಂದೆಯನ್ನು ಕೆಎ 45 ಟಿ 6680 ಟ್ರ್ಯಾಕ್ಟರ್ ಮೂಲಕ ನಾಶ ಪಡಿಸಿರುವ ಬಗ್ಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. 2020 ರಲ್ಲೂ ಕೂಡ ದಾವಾ ಸ್ವತ್ತು ಲೇ-ಔಟ್ ಆಗಿರಲಿಲ್ಲ ಎಂದರೆ ಸರಿ. 2022 ನೇ ಸಾಲಿನಲ್ಲಿ ನನ್ನ ಸಹೋದರ ಈಶ್ವರ ನಿಗೆ ಜಿ.ಪಿ.ಎ ಹೋಲ್ಡರ್ಆಗಿದ್ದೆ ಅದು ನ್ಯಾಯಾಲಯಕ್ಕೆ ಕೊಟ್ಟಿದ್ದೇನೊ ಇಲ್ಲವೊ ಜ್ಞಾಪಕ ಇಲ್ಲ. ದಾವಾ ಹೂಡುವ ಸಮಯದಲ್ಲಿ ಈಶ್ವರ ನಿಗೆ ಜಿ.ಪಿ.ಎ ಹೋಲ್ಡರ್ ಆಗಿರಲಿಲ್ಲ ಎಂದರೆ ಸರಿಯಲ್ಲ. ಇದೆ ನ್ಯಾಯಾಲಯದಲ್ಲಿ ಓ.ಎಸ್ ನಂ. 233/2024 ರಂತೆ ಈಶ್ವರ ರವರು ನನ್ನ ಮೇಲೆ ಕೇಸ್ ಹಾಕಿದ್ದಾರೆ ಎಂದರೆ ಸರಿ. ಸದರಿ ಕೇಸ್ ಇನ್ನೂ ಅದೇಶದ ಪುಟಗಳ ದೃಡೀಕೃತ ಪ್ರತಿಗಳನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಪಿ. 6** ಎಂದು ಗುರುತಿಸಲಾಯಿತು. ಸದರಿ ದಾವಾ ಪತ್ರ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಪಿ. 7** ಎಂದು ಗುರುತಿಸಲಾಯಿತು. ಸದರಿ

ದಾವೆಯಲ್ಲಿ ದಿಃ 24.05.2024 ಮತ್ತು ದಿಃ 12.07.2015 ರ ಎರಡೂ ಜಿ.ಪಿ.ಎ ಅನ್ನು ರದ್ದು ಮಾಡಿರುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. 2022 ರಲ್ಲಾಗಲಿ ಅಥವಾ 1997 ರಲ್ಲಾಗಲಿ ನನಗೆ ಈಶ್ವರ ರವರು ಜಿ.ಪಿ.ಎ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಕೇಸನಲ್ಲಿ ಸಲ್ಲಿಸಿರುವ ವಕಾಲತ್ ನಲ್ಲಿ 3 ನೇ ಪ್ರತಿವಾದಿ ಸಹಿ ಮಾಡಿಲ್ಲ ಎಂದರೆ ಸರಿ. ನಾನು ಸಲ್ಲಿಸಿರುವ ವಕಾಲತ್ ನಲ್ಲಿ ಜಿ.ಪಿ.ಎ ಹೋಲ್ಡರ್ ನ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲೂ ಸಹ ಈಶ್ವರ ರವರು ಸಹಿ ಮಾಡಿಲ್ಲ ಎಂದರೆ ಸರಿ. ನಾನು ಈಶ್ವರ ರವರ ಜಿ.ಪಿ.ಎ ಹೋಲ್ಡರ್ ಎಂದು ಲಿಖಿತ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

ದಿಃ 29.03.2025 ರಂದು ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ ಜಿ.ಪಿ.ಎ ಹೋಲ್ಡರ್ ಆಗಿರಲಿಲ್ಲ ಎಂದರೆ ಸರಿಯಲ್ಲ. ಈ ಕೇಸ್ ಗೆ ಸಂಬಂಧಿಸಿದಂತೆ ಈಶ್ವರ್ ರವರು ಯಾವುದೆ ಜಿ.ಪಿ.ಎ ಕೊಟ್ಟಿಲ್ಲ ಎಂದರೆ ಪ್ರತ್ಯೇಕವಾಗಿ ಕೊಟ್ಟಿಲ್ಲ ಎಲ್ಲದ್ದಕ್ಕೂ ಸಂಬಂಧಪಟ್ಟಂತೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ಪರವಾಗಿ ನಾನು ಸಾಕ್ಷಿ ಹೇಳುತ್ತಿಲ್ಲ ಎಂದರೆ ಅಧಿಕಾರ ಪತ್ರದ ಮೇರೆಗೆ ಸಾಕ್ಷಿ ಹೇಳುತ್ತಿದ್ದೇನೆ ಎನ್ನುತ್ತಾರೆ. ನಿಡಿ. 54 ರಿಂದ 63 ರ ದಾಖಲೆಗಳು ನನ್ನ ಮತ್ತು ಸಹೋದರ ಈಶ್ವರ ರವರ ಹೆಸರಿನಲ್ಲಿ ಇರುವ ಆರ್.ಟಿ.ಸಿ ಗಳು ಆಗಿವೆ. ನಿಡಿ. 57 ಮತ್ತು 58 ರ ಆರ್.ಟಿ.ಸಿ ಪ್ರಕಾರ ನನ್ನ ಹೆಸರು ಕೆ.ಪಿ ಮಹೇಶ್ ಎಂದರೆ ಮೊದಲು ಅದೆ ಹೆಸರು ಇತ್ತು ಈಗ ಬದಲಾವಣೆ ಮಾಡಿಕೊಂಡಿದ್ದೆ ಎನ್ನುತ್ತಾರೆ. ನಿಡಿ. 54 ರಿಂದ 56 ರ ದಾಖಲೆಗಳಲ್ಲಿ ನನ್ನ ಹೆಸರು ಕೆ.ಪಿ. ಮಹೇಶ್ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿ ಪುನಃ ಕುಟುಂಬದ ಜಂಟಿ ಆಸ್ತಿಗಳಲ್ಲಿ ಕೆ.ಪಿ. ಮಹೇಶ್ ಎಂತಲೆ ಇದೆ ಎನ್ನುತ್ತಾರೆ. ಕೆ.ಪಿ. ಮಹೇಶ್ ಎಂದು ಹೆಸರು ಇರುವ ಸಮಯದಲ್ಲಿ ಕೆ.ಪಿ. ಮಹೇಶ್ ಎಂತಲೆ ಸಹಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಿಡಿ. 58 ಮತ್ತು 59 ರ ಆರ್.ಟಿ.ಸಿಗಳಲ್ಲಿ ಕೆ.ಪಿ. ಮಹೇಶ್ ಎಂದೆ ನಮೂದು ಇರುತ್ತದೆ ಎಂದರೆ ಸರಿ. 1989-90 ನೇ ಸಾಲಿನಲ್ಲಿ ಕೆ.ಪಿ.

ಮಹೇಶ್ ಮಹಿ ಮಹೇಶ್ ಎಂದು ಬದಲಾವಣೆ ಮಾಡಿಕೊಂಡಿರುತ್ತೇನೆ. ಅದಕ್ಕೂ ಮೊದಲು ನನ್ನ ಹೆಸರು ಕೆ.ಪಿ. ಮಹೇಶ್, ಕೊತ್ತೆಗಾಲ ಪುಟ್ಟಣ್ಣ ಮಹೇಶ್ ಎಂದು ಇತ್ತು. ಸಿಟಿಜನ್‌ಶಿಪ್ ಚೇಂಜ್ ಮಾಡಿಸಿಕೊಳ್ಳುವ ಸಮಯದಲ್ಲಿ ನನ್ನ ಹೆಸರು ಬದಲಾವಣೆ ಮಾಡಿಕೊಂಡಿರುತ್ತೇನೆ ಎನ್ನುತ್ತಾರೆ. ಕ್ರಯ ಪತ್ರದಲ್ಲಿ ಮಹಿ ಮಹೇಶ್ ಎಂದೇ ಇರುವ ಕಾರಣ ನನ್ನ ಹೆಸರನ್ನು ಬದಲಾವಣೆ ಮಾಡಿಸಿಕೊಂಡೆ ಎಂದರೆ ಸರಿಯಲ್ಲ. 1996 ರಿಂದ 1998 ರ ವರೆಗೆ ನನ್ನ ಹೆಸರು ಕೆ.ಪಿ. ಮಹೇಶ್ ಎಂದೇ ಇರುತ್ತದೆ ಎಂದರೆ ಲಾ ಸರ್ಟಿಫಿಕೇಟ್ ಪಡೆದ ನಂತರ ಬದಲಾವಣೆ ಮಾಡಿಕೊಂಡೆ ಎನ್ನುತ್ತಾರೆ. ನಾನು ಕೆ.ಪಿ. ಮಹೇಶ್ ಹೊರತು ಮಹಿ ಮಹೇಶ್ ಅಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.